ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
**Karnataka State Road Transport Corporation**

ಲೆಕ್ಕಪತ್ರ ಶಾಖೆ
Accounts Department

ಸಾರಿಗೆ ಭವನ, ಶಾಂತಿನಗರ, ಬೆಂಗಳೂರು – 560 027
ದೂರವಾಣಿ / ಫ್ಯಾಕ್ಸ್ ಸಂಖ್ಯೆ : 080-22239449

Transport House, Shanthinagar, Bangalore -560 027
Telephone / Fax No. : 080 - 22239449

ಸಂಖ್ಯೆ:ಕರಾಸಾ/ಕೇಕ/ಲೆಪ/ವೇತನ/ 1107/26-27 ದಿನಾಂಕ: .06.2026. 01.07.2026

# ಸುತ್ತೋಲೆ ಸಂಖ್ಯೆ: 04 /2026
(ಲೆಕ್ಕಪತ್ರ ಇಲಾಖೆಯಿಂದ ಹೊರಡಿಸಲಾಗಿದೆ)

ವಿಷಯ: ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಮತ್ತು ಅಧಿಕಾರಿಗಳ (ಪೂರ್ವ ಕಿಂಕೋ ನೌಕರರು ಸೇರಿದಂತೆ) ಮೂಲವೇತನ ಪರಿಷ್ಕರಿಸುವ ಕುರಿತು.

ಉಲ್ಲೇಖ: 1. ಕರಾಸಾ/ಕೇಕ/ಕಾರ್ಮಿಕ/04/2026-27, ದಿನಾಂಕ: 11.05.2026
2. ಸರ್ಕಾರದ ಆದೇಶ ಸಂಖ್ಯೆ: ಟಿಡಿ 12 ಟಿಸಿಬಿ 2023, ಬೆಂಗಳೂರು ದಿನಾಂಕ: 12.05.2026.
3. ಕರಾಸಾ/ಕೇಕ/ಕಾರ್ಮಿಕ/ 87/2026-27, ದಿನಾಂಕ: 13.05.2026.

***

ಕರ್ನಾಟಕ ರಾಜ್ಯದ ನಾಲ್ಕೂ ರಸ್ತೆ ಸಾರಿಗೆ ನಿಗಮಗಳು ಅಂದರೆ ಕರಾರಸಾ ನಿಗಮ, ಬೆಂಮಸಾ ಸಂಸ್ಥೆ, ವಾಕರಸಾ ಸಂಸ್ಥೆ ಹಾಗೂ ಕಕರಸಾ ನಿಗಮಗಳ ನೌಕರರ ಮತ್ತು ಅಧಿಕಾರಿಗಳ (ಪೂರ್ವ ಕಿಂಕೋ ನೌಕರರು ಸೇರಿದಂತೆ) ವೇತನವನ್ನು ಪರಿಷ್ಕರಿಸಲು ಉಲ್ಲೇಖಿತ ಪತ್ರ 01 ರಲ್ಲಿ ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಘನ ರಾಜ್ಯ ಸರ್ಕಾರವು ನಾಲ್ಕೂ ರಸ್ತೆ ಸಾರಿಗೆ ನಿಗಮಗಳ ಅರ್ಹ ನೌಕರರ/ಅಧಿಕಾರಿಗಳ (ಪೂರ್ವ ಕಿಂಕೋ ನೌಕರರು ಸೇರಿದಂತೆ) ದಿನಾಂಕ: 31.03.2025 ರಂದು ಪಡೆಯುತ್ತಿದ್ದ ಮೂಲ ವೇತನವನ್ನು ಶೇ.12.50 ರಷ್ಟು ಹೆಚ್ಚಿಸಿ, ದಿನಾಂಕ: 01.04.2025 ರಿಂದ ಮೂಲ ವೇತನವನ್ನು ಪರಿಷ್ಕರಿಸಿ, ಅದರಂತೆ ಎಲ್ಲಾ ವೇತನ ಶ್ರೇಣಿಗಳನ್ನು ಜಾರಿಗೊಳಿಸಲು ಆದೇಶ ಸಂಖ್ಯೆ ಟಿಡಿ 12 ಟಿಸಿಬಿ 2023, ಬೆಂಗಳೂರು ದಿನಾಂಕ: 12.05.2026 ರಲ್ಲಿ ಅನುಮೋದನೆ ನೀಡಿ ಆದೇಶಿಸಿರುತ್ತದೆ.

## ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿ ಮಾಡುವ ವಿಧಾನ:-

01. ದಿನಾಂಕ: 31.03.2025 ರಲ್ಲಿದ್ದ ಮೂಲ ವೇತನಕ್ಕೆ ಶೇಕಡ 12.50 (ಹನ್ನೆರಡೂವರೆ) ರಷ್ಟು ಮೊತ್ತವನ್ನು ಕೂಡಿಸುವುದು (ಕುಟುಂಬ ಯೋಜನೆ ವಿಶೇಷ ಭತ್ಯೆ ಹೊರತುಪಡಿಸಿ).

02. ಕರಾಸಾ/ಕೇಕ/ಲೆಪ/ಪಾವತಿ/1007/25-26 ದಿನಾಂಕ: 26.06.2025 ರ ಸುತ್ತೋಲೆ ಸಂಖ್ಯೆ 04/2025 ರನ್ವಯ ನಿಗದಿಪಡಿಸಿರುವ ಮೂಲತುಟ್ಟಿಭತ್ಯೆಯ ಮೊತ್ತವನ್ನು ಕೂಡಿಸುವುದು ಹಾಗೂ ವಿಶೇಷ ಸಂದರ್ಭಗಳಲ್ಲಿ ಮೂಲತುಟ್ಟಿಭತ್ಯೆ ನಿಗದಿಪಡಿಸಿರುವ ಬಗ್ಗೆ ಸುತ್ತೋಲೆಯಲ್ಲಿನ ಮಾರ್ಗದರ್ಶನಗಳನ್ನು ಪಾಲಿಸುವುದು.

03. ದಿನಾಂಕ: 01.04.2025 ರಂದು ವಾರ್ಷಿಕ ವೇತನ ಬಡ್ತಿ ಲಭ್ಯವಿದ್ದಲ್ಲಿ ವಾರ್ಷಿಕ ವೇತನ ಬಡ್ತಿ (ಪ್ರಸಕ್ತ ವೇತನ ಶ್ರೇಣಿ) ಯಲ್ಲಿ ಮೊತ್ತವನ್ನು ಕೂಡಿಸುವುದು.

04. ಕ್ರಮ ಸಂ 01, 02 ಮತ್ತು 03 ರಲ್ಲಿ ಲೆಕ್ಕ ಹಾಕಲಾದ ಒಟ್ಟು ಮೊತ್ತವು ಸದರಿ ಹುದ್ದೆಯ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನಕ್ಕಿಂತ ಕಡಿಮೆ ಇದ್ದಲ್ಲಿ ಕನಿಷ್ಠ ಮೂಲ ವೇತನ ನಿಗದಿಗೊಳಿಸುವುದು, ಒಟ್ಟು ಮೊತ್ತವು ಹುದ್ದೆಯ ವೇತನ ಶ್ರೇಣಿಯ ಹಂತದಲ್ಲಿದ್ದರೆ ಅದೇ ಹಂತದಲ್ಲಿ ಮತ್ತು ಎರಡು ಹಂತಗಳ ಮಧ್ಯದಲ್ಲಿದ್ದರೆ ಪರಿಷ್ಕೃತ ವೇತನ ಶ್ರೇಣಿಯ ಮುಂದಿನ ಹಂತದಲ್ಲಿ ನಿಗದಿಗೊಳಿಸುವುದು.

05. ನೌಕರರು/ಅಧಿಕಾರಿಗಳ ವಾರ್ಷಿಕ ವೇತನ ಬಡ್ತಿಯು ದಿನಾಂಕ: 02.04.2025 ಮತ್ತು ನಂತರದ ಅವಧಿಯಲ್ಲಿ ಲಭ್ಯವಿದ್ದು ಸದರಿ ದಿನಾಂಕದಂದು ಚಾಲ್ತಿ ವೇತನ ಶ್ರೇಣಿಯಲ್ಲಿದ್ದ ವಾರ್ಷಿಕ ವೇತನ ಬಡ್ತಿ ಮೊತ್ತವನ್ನು ಕೂಡಿಸಿ ಲಾಭದಾಯಕವಾಗುವಂತಿದ್ದಲ್ಲಿ ಪರಿಷ್ಕೃತ ಶ್ರೇಣಿಯಲ್ಲಿ ಮೂಲ ವೇತನವನ್ನು ಮರು ನಿಗದಿಗೊಳಿಸುವುದು.

06. ನೌಕರರು/ಅಧಿಕಾರಿಗಳ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿನಾಂಕ: 01.04.2026 ರಿಂದ ಅಥವಾ ಕ್ರಮ ಸಂಖ್ಯೆ 5 ರಂತೆ ಮೂಲ ವೇತನ ಮರು ನಿಗದಿಗೊಳಿಸಿದ ದಿನಾಂಕದಿಂದ ಒಂದು ವರ್ಷದ ನಂತರ ನೀಡುವುದು.

07. ಮುಂಬಡ್ತಿ ಅವಕಾಶಗಳಿಲ್ಲದ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ದಿನಾಂಕ: 01.04.2025 ರಂದು ಅಥವಾ ನಂತರದ ದಿನಗಳಲ್ಲಿ 15 ವರ್ಷಗಳ ನಿರಂತರ ಸೇವೆಯನ್ನು ಪೂರ್ಣಗೊಳಿಸಿ ಉನ್ನತ ವೇತನ ಶ್ರೇಣಿಗೆ ಅರ್ಹರಾಗಿ ಸಿಬ್ಬಂದಿ ಅದೇಶ ಹೊರಡಿಸಿದಲ್ಲಿ ಪರಿಷ್ಕೃತ ಉನ್ನತ ವೇತನ ಶ್ರೇಣಿಯಲ್ಲಿ ಮೂಲ ವೇತನ ನಿಗದಿಪಡಿಸುವುದು. ಈ ಸೌಲಭ್ಯವು ಉದ್ಯೋಗಿಗಳ ಸೇವಾವಧಿಯಲ್ಲಿ ಒಮ್ಮೆ ಮಾತ್ರ ದೊರೆಯುತ್ತದೆ.

08. ಮುಂಬಡ್ತಿ ಅವಕಾಶವಿರುವ ಹುದ್ದೆಯಲ್ಲಿ 15 ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿ ಮುಂಬಡ್ತಿ ದೊರೆಯದೆ ಇದ್ದು ಆಯ್ಕೆ ಶ್ರೇಣಿಗೆ ಅರ್ಹರಾಗಿ ಸಿಬ್ಬಂದಿ ಆದೇಶ ಹೊರಡಿಸಿದಲ್ಲಿ ಪರಿಷ್ಕೃತ ಮಧ್ಯವರ್ತಿ ವೇತನ ಶ್ರೇಣಿಯಲ್ಲಿ ಮೂಲ ವೇತನ ನಿಗದಿಪಡಿಸುವುದು. ಈ ಸೌಲಭ್ಯವು ನೌಕರರ ಸೇವಾವಧಿಯಲ್ಲಿ ಒಮ್ಮೆ ಮಾತ್ರ ದೊರೆಯುತ್ತದೆ.

09. ಅಧಿಕಾರಿ ವರ್ಗದವರಿಗೆ (ಸದರಿಯವರುಗಳ ನೇಮಕಾತಿ/ಸೇವಾ ನಿಬಂಧನೆಗಳ ಅನ್ವಯ) ಅವರುಗಳ ಮುಂದಿನ ವೇತನ ಬಡ್ತಿ/ಸ್ಥಗಿತ ವೇತನ ಬಡ್ತಿಯನ್ನು ದಿನಾಂಕ: 01.04.2026 ರಿಂದ ಅಥವಾ ಮೂಲ ವೇತನ ಪುನರ್ ನಿಗದಿಗೊಳಿಸಿದ ದಿನಾಂಕದಿಂದ ಒಂದು ವರ್ಷದ ನಂತರ ವಾರ್ಷಿಕ ವೇತನ ಬಡ್ತಿ/ಸ್ಥಗಿತ ವೇತನ ಬಡ್ತಿ ಮಂಜೂರಾತಿ/ಕೆಸಿಎಸ್‌ಆರ್ ನಿಯಮದ ಪ್ರಕಾರ ಅರ್ಹ ಪ್ರಕರಣಗಳಲ್ಲಿ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವುದು.

10. ಶಿಕ್ಷಾದೇಶಗಳು ಜಾರಿಯಲ್ಲಿರುವ ಪ್ರಕರಣಗಳಲ್ಲಿ ವೇತನ ನಿಗದಿಗೊಳಿಸುವಾಗ ಸುತ್ತೋಲೆ ಸಂಖ್ಯೆ 1586/2016–17 ದಿನಾಂಕ: 12.04.2016 ರ ಕಂಡಿಕೆ II (3) ರಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸುವುದು.

11. ದಿನಾಂಕ: 01.04.2025 ರಿಂದ ದಿನಾಂಕ: 30.06.2026 ರವರೆಗೆ ಈಗಾಗಲೇ ನೀಡಿರುವ ವಾರ್ಷಿಕ ವೇತನ ಬಡ್ತಿ, ಶಿಕ್ಷಾದೇಶಗಳು ಮತ್ತು ಇತರೆಗಳನ್ನು ಪರಿಷ್ಕೃತ ವೇತನ ಶ್ರೇಣಿಯೊಂದಿಗೆ ನಿಗದಿಗೊಳಿಸಿ ಪರಿಷ್ಕರಿಸುವುದು.

12. ದಿನಾಂಕ: 01.07.2026 ರಂದು ಸೇವೆಯಲ್ಲಿ ಮುಂದುವರೆದ ನೌಕರರು/ಅಧಿಕಾರಿಗಳಿಗೆ ಪರಿಷ್ಕೃತ ಮೂಲ ವೇತನವನ್ನು ದಿನಾಂಕ: 01.04.2025 ರಿಂದ ಜಾರಿಗೊಳಿಸಿ, ಜುಲೈ-2026 ರ ಮಾಹೆಯಿಂದ ಮತ್ತು ಮುಂದಕ್ಕೆ ವೇತನದಲ್ಲಿ ಅನುಷ್ಠಾನಗೊಳಿಸಿ ಪಾವತಿಸುವುದು.

13. ದಿನಾಂಕ: 01.04.2025 ರಿಂದ ದಿನಾಂಕ: 30.06.2026 ರ ಅವಧಿಯಲ್ಲಿ ಸೇವಾ ವಿಮುಕ್ತರಾದ ನೌಕರರು/ಅಧಿಕಾರಿಗಳ ಮೂಲ ವೇತನ ಪರಿಷ್ಕರಣೆಯನ್ನು ಮೇಲ್ಕಂಡ ಸೂಚನೆಗಳನ್ವಯ ನಿಗದಿಗೊಳಿಸುವುದು.

14. ದಿನಾಂಕ: 01.04.2025 ರಿಂದ ದಿನಾಂಕ: 30.06.2026 ರ ಅವಧಿಯ ವೇತನ ಪರಿಷ್ಕರಣೆಯ ಹಿಂಬಾಕಿ ಹಾಗೂ ಪರಿಷ್ಕೃತ ವೇತನ ಶ್ರೇಣಿಯನ್ವಯ ಉಪಧನ ಮತ್ತು ನಿವೃತ್ತ ಗಳಿಕೆ ರಜೆ ನಗದೀಕರಣ ವ್ಯತ್ಯಾಸವನ್ನು ಲೆಕ್ಕಾಚಾರಗೊಳಿಸಿ ಬಿಲ್ಲುಗಳನ್ನು ಸಿದ್ಧಪಡಿಸಿಕೊಳ್ಳುವುದು.

15. ವೇತನ ಪರಿಷ್ಕರಣೆ ಹಿಂಬಾಕಿ, ಉಪಧನ ಮತ್ತು ನಿವೃತ್ತ ಗಳಿಕೆ ರಜೆ ನಗದೀಕರಣ ವ್ಯತ್ಯಾಸದ ಮೊತ್ತವನ್ನು ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಹಂತ ಹಂತವಾಗಿ ಪಾವತಿಸಲು ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

ಈ ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿಯನ್ನು ಕಳುಹಿಸುವುದು.

ಅನುಬಂಧಗಳು:-

1) ಕರಾರಸಾ ನಿಗಮಗಳ ನೌಕರರ ಕಾಲಿಕ ವೇತನ ಶ್ರೇಣಿಗಳು.
2) ಕರಾರಸಾ ನಿಗಮಗಳ ಅಧಿಕಾರಿಗಳ ಕಾಲಿಕ ವೇತನ ಶ್ರೇಣಿಗಳು.
3) ಕರಾರಸಾ ನಿಗಮಗಳ ನೌಕರರ ಮಧ್ಯವರ್ತಿ ವೇತನ ಶ್ರೇಣಿಗಳು.
4) ಕರಾರಸಾ ನಿಗಮಗಳ ನೌಕರರ ಉನ್ನತ ವೇತನ ಶ್ರೇಣಿಗಳು.
5) ಕರಾರಸಾ ನಿಗಮಗಳ ಕ್ಯಾಂಟಿನ್ ನೌಕರರ ಕಾಲಿಕ ವೇತನ ಶ್ರೇಣಿಗಳು.
6) ಪೂರ್ವ ಕಿಂಕೋ ನೌಕರರ ಮಧ್ಯವರ್ತಿ ವೇತನ ಶ್ರೇಣಿಗಳು.

K.B. [signature] 01/07

(ಶಿವಕುಮಾರ್ ಕೆ.ಬಿ)
ವ್ಯವಸ್ಥಾಪಕ ನಿರ್ದೇಶಕರು.
ಕ.ರಾ.ರ.ಸಾ. ನಿಗಮ: ಕೇಂದ್ರ ಕಛೇರಿ.

ಅಡಕ: ಪರಿಷ್ಕೃತ ವೇತನ ಶ್ರೇಣಿಗಳ ಅನುಬಂಧಗಳು.

ಪ್ರತಿಯನ್ನು:-ಕೆಳಕಂಡವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

01. ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ. ಬೆಂಮಸಾ/ ವಾಕರಸಾ/ ಕಕರಸಾ ಸಂಸ್ಥೆಗಳು.

02. ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು.

03. ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿ ಕರಾರಸಾ ನಿಗಮದ ವಿಭಾಗಗಳು.

04. ಕಾರ್ಯ ವ್ಯವಸ್ಥಾಪಕರು, ಪ್ರಾದೇಶಿಕ ಕಾರ್ಯಾಗಾರ, ಬೆಂಗಳೂರು/ ಹಾಸನ.

05. ಕಾರ್ಯ ನಿರ್ವಾಹಕ ಅಭಿಯಂತರರು, ಕರಾರಸಾ ನಿಗಮ, ಬೆಂಗಳೂರು/ ಮೈಸೂರು/ ತುಮಕೂರು/ ಹಾಸನ.

ಪ್ರತಿಯನ್ನು: – ಕೆಳಕಂಡವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

01. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾ/ ವಾಕರಸಾ/ ಕಕರಸಾ ಸಂಸ್ಥೆಗಳು ರವರುಗಳ ಮಾಹಿತಿಗಾಗಿ

02. ನಿರ್ದೇಶಕರು (ಸಿ ಮತ್ತು ಜಾ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.

03. ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿಗಳು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು, ರವರ ಮಾಹಿತಿಗಾಗಿ ಹಾಗೂ ನಿಗಮದ ನೊಂದಾಯಿತ ಕಾರ್ಮಿಕ ಸಂಘಟನೆಗಳಿಗೆ ಸುತ್ತೋಲೆ ಪ್ರತಿಯನ್ನು ಕಳುಹಿಸಲು ಅಗತ್ಯ ಕ್ರಮಕೈಗೊಳ್ಳಲು.

04. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ನಿಗಮದ ಅಂತರ್ ಜಾಲದಲ್ಲಿ ಪ್ರಕಟಿಸಲು ಅಗತ್ಯಕ್ರಮ ಕೈಗೊಳ್ಳುವುದು.

05. ನಿವಾಸಿ ಲೆಕ್ಕಪರಿಶೋಧಕರು, ಕರಾರಸಾ ಸಂಸ್ಥೆ, ಕೇಂದ್ರ ಕಛೇರಿ ಬೆಂಗಳೂರು ರವರ ಮಾಹಿತಿಗಾಗಿ.

06. ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು, ಕರಾರಸಾ ನಿಗಮ, ಕೇಂದ್ರಕಛೇರಿ, ಬೆಂಗಳೂರು ರವರ ಕ್ರಮಕ್ಕಾಗಿ.

ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ.
ಕರಾರಸಾ ನಿಗಮ: ಕೇಂದ್ರಕಛೇರಿ

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ ಬೆಂಗಳೂರು

**ಅನುಬಂಧ– 1**

**ದಿನಾಂಕ:** 01.04.2025 ರಿಂದ ಕಾಲಿಕ ವೇತನ ಶ್ರೇಣಿಗಳು

| ಕ್ರ ಸಂ | ಪ್ರಸ್ತುತ ವೇತನ ಶ್ರೇಣಿ. | ಉದ್ಯೋಗಿಗಳ ವರ್ಗ | ಪರಿಷ್ಕೃತ ವೇತನ ಶ್ರೇಣಿ. |
|---|---|---|---|
| 1 | 18140-230-19290-280-20690-410-23150-520-24190 | ಸಹಾಯಕ (ಮುದ್ರಣ) ಕಛೇರಿ ಸಹಾಯಕ ಅಟೆಂಡರ್–ಕಮ್–ಡ್ರೆಸ್ಸರ್ / ರೂಂ ಬಾಯ್ / ಗಾರ್ಡನಿಂಗ್ / ಗಾರ್ಡನಿಂಗ್–ಕಂ–ಮಾಲಿ/ ಸ್ವೀಪಿಂಗ್–ಕಂ–ಮಾಲಿ. | 26040-330-27690-410-29740-590-33280-750-34780 |
| 2 | 18400-230-19090-280-20490-410-22950-520-25030 | ಹವಾಲ್ದಾರ್/ ಸಹಾಯಕ– ಮಾಲಿ/ ಹೆಡ್ ಮಾಲಿ. | 26410-330-27400-410-29450-590-32990-750-35990 |
| 3 | 18660-230-19120-280-20240-410-22700-520-25300 | ತಾಂತ್ರಿಕ ಸಹಾಯಕ/ ನಿರ್ವಾಹಕ/ ಕರಾಸಾ ಪೇದೆ. | 26780-330-27440-410-29080-590-32620-750-36370 |
| 4 | 19880-280-20440-410-22900-520-25500-680-28220 | ಸ.ಕು.ಕರ್ಮಿ/ಸ.ಕಂಪೋಸಿಟರ್/ ಸ.ಬೈಂಡರ್/ಯಂತ್ರ ಚಾಲಕ/ ಚೆಕ್ಕರ್&ಪ್ಯಾಕರ್ / ಕೇರ್‌ಟೇಕರ್ –ಕಂ–ಕುಕ್ | 28530-410-29350-590-32890-750-36640-980-40560 |
| 5 | 19880-280-20440-410-22900-520-25500-680-26860-850-29410-1030-31470 | ಚಾಲಕರು/ಚಾಲಕ ಕಂ ನಿರ್ವಾಹಕರು | 28530-410-29350-590-32890-750-36640-980-38600-1220-42260-1480-45220 |
| 6 | 20180-280-20740-410-22790-520-25390-680-26750-850-29300-1030-31360 | ಸಂಚಾರ ನಿಯಂತ್ರಕ/ ಕರಾಸಾ ಹವಾಲ್ದಾರ್/ಫಾರ್ಮಸಿಸ್ಟ್/ ಕಿ.ಸ.ಕಂ.ಡಾಟಾ.ಎಂಟ್ರಿ.ಆಪರೇಟರ್/ ಕಿರಿಯ ನಗದಿಗ/ಸ್ವಾಗತಗಾರ/ ರೇಖಕ/ಕ್ಷಕಿರಣ ತಂತ್ರಜ್ಞ/ ಕಿರಿಯ ಪ್ರಯೋಗಶಾಲೆ ತಂತ್ರಜ್ಞ | 28960-410-29780-590-32730-750-36480-980-38440-1220-42100-1480-45060 |
| 7 | 22390-410-23210-520-25290-680-26650-850-29200-1030-33320 | ಸ.ಸಂಚಾರ.ನಿರೀಕ್ಷಕ/ ಕು.ಕರ್ಮಿ/ ಕಂಪೋಸಿಟರ್/ಬೈಂಡರ್/ಯಂತ್ರ ಚಾಲಕ/ ಎಲೆಕ್ಟ್ರಿಷಿಯನ್/ಮೆಕಾನಿಕ್ (ಮುದ್ರಣ) / ಸಬ್ ಒವರ್ ಸಿಯರ್/ ಚೀಟಿ ಪರೀಕ್ಷಕ ಹಿರಿಯ ಡಾಟಾ ಎಂಟ್ರಿ ಆಪರೇಟರ್/ ಸಹಾಯಕ ನಕ್ಷೇಗಾರ | 32130-590-33310-750-36310-980-38270-1220-41930-1480-47850 |

| | | | |
|---|---|---|---|
| 8 | 23990-520-25550-680-26910-850-29460-1030-34610-1170-42800 | ಲೀಡಿಂಗ್ ಹ್ಯಾಂಡ್/ ಮು.ಕು.ಕರ್ಮಿ / ಪ್ರೂಫ್ ವೆರಿಫೈಯರ್/ ಹಿರಿಯ ಕಂಪೋಸಿಟರ್/ ಹಿರಿಯ ಬೈಂಡರ್ ಹಿರಿಯ ಯಂತ್ರಚಾಲಕ/ ಹಿರಿಯ ಚೀಟಿ ಪರೀಕ್ಷಕ / ಸಹಾಯಕ ಮೇಲ್ವಿಚಾರಕ (ವಿದ್ಯುತ್)/ ಎ.ಸಿ.ಎಲೆಕ್ಟ್ರಿಷಿಯನ್/ ಸಹಾಯಕ/ ಕಿರಿಯ ಶೀಘ್ರಲಿಪಿಗಾರ/ ವೇಳೆ ಪಾಲಕ/ ಸಹಾಯಕ ಲೆಕ್ಕಿಗ /ಅಂಕಿ ಅಂಶ ಸಹಾಯಕ ಸ.ಉಗ್ರಾಣ ರಕ್ಷಕ/ ಹಿರಿಯ ನಗದಿಗ / ಸ.ಭದ್ರತಾ ನಿರೀಕ್ಷಕ/ಸಿಬ್ಬಂದಿ ದಾದಿ/ ಗಣಕ ಯಂತ್ರ ಆಪರೇಟರ್ | 34430-750-36680-980-38640-1220-42300-1480-49700-1680-61460 |
| 9 | 26810-680-28170-850-30720-1030-35870-1170-41720-1330-45710 | ಸಂಚಾರ ನಿರೀಕ್ಷಕ, ಪಾರುಪತ್ತೆಗಾರ, ಪಾರುಪತ್ತೆಗಾರ (ಮುದ್ರಣ) ವಿಭಾಗೀಯ ಭದ್ರತಾ ನಿರೀಕ್ಷಕ. ಲೆಕ್ಕಪತ್ರ ಪರಿವೀಕ್ಷಕ/ಉಗ್ರಾಣ ರಕ್ಷಕ ಮೇಲ್ವಿಚಾರಕರು (ಲೆಕ್ಕಪತ್ರ/ಸಿಬ್ಬಂದಿ/ಅಂಕಿ ಅಂಶ/ಗಣಕ) ನಕ್ಷೆಗಾರ / ಹಿರಿಯ ಶೀಘ್ರಲಿಪಿಗಾರ ಕಿರಿಯ ಅಭಿಯಂತರರು (ಕಾಮಗಾರಿ/ವಿದ್ಯುತ್) | 38480-980-40440-1220-44100-1480-51500-1680-59900-1910-65630 |
| 10 | 28850-1030-31940-1170-40130-1330-48110 | ಸಹಾಯಕ ಸಂಚಾರ ಅಧೀಕ್ಷಕ/ ಸಹಾಯಕ ಕಾರ್ಯ ಅಧೀಕ್ಷಕ / ಮೇಲ್ವಿಚಾರಕ (ವಿದ್ಯುತ್)<br><br>ಅಧೀಕ್ಷಕ (ಲೆಕ್ಕಪತ್ರ/ಆಡಳಿತ/ ಉಗ್ರಾಣ/ಅಂಕಿಅಂಶ/ಗಣಕ)/ವಿಭಾಗೀಯ ಭದ್ರತಾ ಅಧೀಕ್ಷಕ<br><br>ಅಧೀಕ್ಷಕ ( ತಾಂತ್ರಿಕ) / ಆಪ್ತ ಸಹಾಯಕ/ ಕಿರಿಯ ಅಭಿಯಂತರರು (ಕಾಮಗಾರಿ/ವಿದ್ಯುತ್ ವಿಶೇಷ-ಶ್ರೇಣಿ) ಪ್ರೋಗ್ರಾಮರ್ / ಹಿರಿಯ ಚಾಲಕ | 41400-1480-45840-1680-57600-1910-69060 |

ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ
ಕರಾರಸಾ ನಿಗಮ: ಕೇಂದ್ರ ಕಛೇರಿ

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ ಬೆಂಗಳೂರು**

**ಅನುಬಂಧ– 2**

ದಿನಾಂಕ: 01.04.2025 ರಿಂದ ಅಧಿಕಾರಿಗಳ ವೇತನ ಶ್ರೇಣಿಗಳು

| ಕ್ರ ಸಂ | ಪ್ರಸ್ತುತ ವೇತನ ಶ್ರೇಣಿ. | ಅಧಿಕಾರಿಗಳ ವರ್ಗ | ಪರಿಷ್ಕೃತ ವೇತನ ಶ್ರೇಣಿ. |
|---|---|---|---|
| 1 | 42600-1300-47800-1510-52330-1750-59330-1960-75010 | ಅಧಿಕಾರಿಗಳು ದರ್ಜೆ–2. | 61140-1870-68620-2170-75130-2520-85210-2820-107770 |
| 2 | 56380-1510-59400-1750-64650-1960-78370-2260-89670 | ಅಧಿಕಾರಿಗಳು ದರ್ಜೆ–1 (ಕಿರಿಯ) | 80910-2170-85250-2520-92810-2820-112550-3250-128800 |
| 3 | 60190-1510-63210-1750-68460-1960-80220-2260-98300 | ಅಧಿಕಾರಿಗಳು ದರ್ಜೆ–1 (ಹಿರಿಯ) | 86380-2170-90720-2520-98280-2820-115200-3250-141200 |
| 4 | 69070-1960-78870-2260-94690-2550-104890 | ಅಧಿಕಾರಿಗಳು ದರ್ಜೆ–1 (ಹಿರಿಯ) ಆಯ್ಕೆ ಶ್ರೇಣಿ. | 99120-2820-113220-3250-135970-3660-150610 |
| 5 | 85900-2260-103980-2550-109080 | ದರ್ಜೆ–1 ಉಚ್ಚ ಕಾಲಿಕ ಶ್ರೇಣಿ | 123270-3250-149270-3660-156590 |

ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ
ಕರಾರಸಾ ನಿಗಮ: ಕೇಂದ್ರ ಕಛೇರಿ

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ ಬೆಂಗಳೂರು

**ಅನುಬಂಧ– 3**

**ದಿನಾಂಕ: 01.04.2025 ರಿಂದ ಮಧ್ಯವರ್ತಿ ವೇತನ ಶ್ರೇಣಿಗಳು**

| ಕ್ರ ಸಂ | ಪ್ರಸ್ತುತ ವೇತನ ಶ್ರೇಣಿ. | ಉದ್ಯೋಗಿಗಳ ವರ್ಗ | ಪರಿಷ್ಕೃತ ವೇತನ ಶ್ರೇಣಿ. |
|---|---|---|---|
| 1 | 18390-230-19540-280-20660-410-23530-520-24570 | ಸಹಾಯಕ (ಮುದ್ರಣ)<br>ಕಛೇರಿ ಸಹಾಯಕ/ರೂಂ ಬಾಯ್ | 26390-330-28040-410-29680-590-33810-750-35310 |
| 2 | 19880-280-20440-410-22490-520-26130-680-28850 | ತಾಂತ್ರಿಕ ಸಹಾಯಕ /<br>ನಿರ್ವಾಹಕ /<br>ಕರಾಸಾ ಪೇದೆ | 28530-410-29350-590-32300-750-37550-980-41470 |
| 3 | 22040-410-22860-520-24940-680-26300-850-28850-1030-32970 | ಸಹಾಯಕ ಕುಶಲಕರ್ಮಿ. | 31630-590-32810-750-35810-980-37770-1220-41430-1480-47350 |
| 4 | 21560-410-22380-520-24460-680-25820-850-28370-1030-32490 | ಕರಾಸಾ ಹವಾಲ್ದಾರ್, | 30940-590-32120-750-35120-980-37080-1220-40740-1480-46660 |
| 5 | 22390-410-23210-520-25290-680-27330-850-29880-1030-34000-1170-36340 | ಕಿ.ಸ.ಕಂ.ಡಾಟಾ.ಎಂಟ್ರಿ.ಆಪರೇಟರ್.<br>ರೇಖಕ (ಟ್ರೇಸರ್) | 32130-590-33310-750-36310-980-39250-1220-42910-1480-48830-1680-52190 |
| 6 | 23340-520-24900-680-26260-850-28810-1030-33960-1170-40980 | ಕುಶಲಕರ್ಮಿ/<br>ಸಹಾಯಕ ಸಂಚಾರ ನಿರೀಕ್ಷಕ | 33500-750-35750-980-37710-1220-41370-1480-48770-1680-58850 |
| 7 | 26810-680-28170-850-30720-1030-35870-1170-40550-1330-44540 | ಸಹಾಯಕ/ಕಿ.ಶಿ.ಅಧಿಕಾರ/ ಸಹಾಯಕ (ಅಂಕಿ.ಅಂಶ)/<br>ಸ.ಉ.ರಕ್ಷಕ/ಎ.ಸಿ.ಎಲೆಕ್ಟ್ರಿಶಿಯನ್/<br>ಸಹಾಯಕ ಲೆಕ್ಕಿಗ. | 38480-980-40440-1220-44100-1480-51500-1680-58220-1910-63950 |
| 8 | 28400-1030-31490-1170-39680-1330-46330 | ಮೇಲ್ವಿಚಾರಕ ಸಿಬ್ಬಂದಿ/<br>ಜೂ.ಇಂಜಿನಿಯರ್/ಪ್ರೋ.ಅಡ್ಮಿನಿಸ್ಟ್ರೇಟರ್ | 40760-1480-45200-1680-56960-1910-66510 |

ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ
ಕರಾರಸಾ ನಿಗಮ: ಕೇಂದ್ರ ಕಛೇರಿ

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ ಬೆಂಗಳೂರು

**ಅನುಬಂಧ- 4**

ದಿನಾಂಕ: 01.04.2025 ರಿಂದ ಉನ್ನತ ವೇತನ ಶ್ರೇಣಿಗಳು

| ಕ್ರ ಸಂ | ಪ್ರಸ್ತುತ ವೇತನ ಶ್ರೇಣಿ. | ಉದ್ಯೋಗಿಗಳ ವರ್ಗ | ಪರಿಷ್ಕೃತ ವೇತನ ಶ್ರೇಣಿ. |
|---|---|---|---|
| 1 | 18400-230-19090-280-20490-410-22950-520-25030 | ಸಹಾಯಕ (ಶುಚಿಗಾರ) | 26410-330-27400-410-29450-590-32990-750-35990 |
| 2 | 19880-280-20440-410-22900-520-25500-680-28220 | ಮಾಲಿ /ಹೆಡ್ ಮಾಲಿ. | 28530-410-29350-590-32890-750-36640-980-40560 |
| 3 | 22390-410-23210-520-25290-680-26650-850-29200-1030-33320 | ಕೇರ್ ಟೇಕರ್-ಕುಕ್. | 32130-590-33310-750-36310-980-38270-1220-41930-1480-47850 |
| 4 | 26810-680-28170-850-30720-1030-34840-1170-38350 | ಚಾಲಕರು/ಚಾಲಕ ಕಂ ನಿರ್ವಾಹಕರು | 38480-980-40440-1220-44100-1480-50020-1680-55060 |
| 5 | 23990-520-25550-680-26910-850-29460-1030-34610-1170-42800 | ಫಾರ್ಮಸಿಸ್ಟ್ (ಕಾಂಪೌಂಡರ್)/ಕಿರಿಯ ಪ್ರಯೋಗಶಾಲಾ ತಂತ್ರಜ್ಞ | 34430-750-36680-980-38640-1220-42300-1480-49700-1680-61460 |
| 6 | 26810-680-28170-850-30720-1030-35870-1170-41720-1330-45710 | ಸಿಬ್ಬಂದಿ ದಾದಿ (ಸ್ಟಾಫ್ ನರ್ಸ್) | 38480-980-40440-1220-44100-1480-51500-1680-59900-1910-65630 |

ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ
ಕರಾರಸಾ ನಿಗಮ: ಕೇಂದ್ರ ಕಛೇರಿ

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ ಬೆಂಗಳೂರು**

**ಅನುಬಂಧ– 5**

ದಿನಾಂಕ: 01.04.2025 ರಿಂದ ಕ್ಯಾಂಟಿನ್ ಉದ್ಯೋಗಿಗಳ ಕಾಲಿಕ ವೇತನ ಶ್ರೇಣಿಗಳು

| ಕ್ರ ಸಂ | ಪ್ರಸ್ತುತ ವೇತನ ಶ್ರೇಣಿ. | ಉದ್ಯೋಗಿಗಳ ವರ್ಗ | ಪರಿಷ್ಕೃತ ವೇತನ ಶ್ರೇಣಿ. |
|---|---|---|---|
| 1 | 18140-230-19290-280-20690-410-23150-520-24710 | ಟೀ–ಕಾಫಿ ತಯಾರಕರು/ ಸಪ್ಲೇಯರ್/ಗ್ರೈಂಡರ್/ಕ್ಲೀನರ್. | 26040-330-27690-410-29740-590-33280-750-35530 |
| 2 | 18400-230-19090-280-20490-410-22950-520-25030 | ಕ್ಯಾಂಟಿನ್ ನಗದಿಗ/ ಸಹಾಯಕ ಕುಕ್. | 26410-330-27400-410-29450-590-32990-750-35990 |
| 3 | 18660-230-19350-280-20750-410-23210-520-25290 | ಕುಕ್ | 26780-330-27770-410-29820-590-33360-750-36360 |

ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ
ಕರಾರಸಾ ನಿಗಮ: ಕೇಂದ್ರ ಕಛೇರಿ

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ ಬೆಂಗಳೂರು

**ಅನುಬಂಧ– 6**

ದಿನಾಂಕ: 01.04.2025 ರಿಂದ ಪೂರ್ವ ಕಿಂಕೋ ನೌಕರರ ಮಧ್ಯವರ್ತಿ ವೇತನ ಶ್ರೇಣಿಗಳು

| ಕ್ರ ಸಂ | ಪ್ರಸ್ತುತ ವೇತನ ಶ್ರೇಣಿ. | ಉದ್ಯೋಗಿಗಳ ವರ್ಗ | ಪರಿಷ್ಕೃತ ವೇತನ ಶ್ರೇಣಿ. |
|---|---|---|---|
| 1 | 14460-230-16760-280-19000 | ಅಟೆಂಡರ್,ಶುಚಿಗಾರ,<br>ಸಹಾಯಕ–ಬಿ,<br>ಭದ್ರತಾ ರಕ್ಷಕ. | 20750-330-24050-410-27330 |

ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ
ಕರಾರಸಾ ನಿಗಮ: ಕೇಂದ್ರ ಕಛೇರಿ